(SRI T. CHANNIAH.)

(*d*) Three compounders and five midwives were posted from time to time.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾಲ್ಕು ಜನ ಡಾಕ್ಟರುಗಳನ್ನು ಅಲ್ಲಿಗೆ ನೇಮಕ ಮಾಡಲಾಯಿತೆಂದು ಉತ್ತರದಲ್ಲಿ ತಿಳಿಸಲಾಗಿದೆ; ಆ ನಾಲ್ಕು ಜನರ ಪೈಕಿ ಒಬ್ಬೊಬ್ಬರು ಎಷ್ಟೆಷ್ಟು ವರ್ಷ ಅಲ್ಲಿದ್ದರೆಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬೆಲ್ಲೇನಹಳ್ಳಿ, ಮಲೇರಿಯಾ ಸ್ಥಳವೆಂದು ತಾನೇ ಅಲ್ಲಿಗೆ ಆಸ್ಪತ್ರೆಯನ್ನು ಕೊಟ್ಟಿದ್ದು ? ಹೀಗಿರುವಾಗ ಅಲ್ಲಿ ಡಾಕ್ಟರುಗಳೇ ಇಲ್ಲದಿದ್ದರೆ ಜನರಿಗೆ ಕಷ್ಟವಾಗುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಅದೊಂದೇ ಕಾರಣದ ಮೇಲಲ್ಲ, ಬೇರೆ ಕಾರಣಗಳಿಗಾಗಿಯೂ ಕೊಟ್ಟದ್ದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಲ್ಲಿಯ ವಿಚಾರವಾಗಿ ಸರ್ಕಾರಕ್ಕೆ ವರದಿ ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಆಸ್ಪತ್ರೆಯಲ್ಲಿ ಡಾಕ್ಟರಿಲ್ಲದೆ ಜವಾನರೇ ಡಾಕ್ಟರ ಕೆಲಸ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ!

ಶ್ರೀ ಟಿ. ಚನ್ನಯ್ಯ.—ಇಲ್ಲ.

Combined Dispensary for Hiriyur Taluk.

Q.—236. **Sri V. MASIYAPPA** (Hiriyur).—

Will the Government be pleased to state:—

(*a*) if the people of Hiriyur Taluk have asked for a Combined Dispensary for Hiriyur Town;

(*b*) if the Government have sanctioned the same?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) Under the consideration of Government.

ಶ್ರೀ ವಿ. ಮಸಿಯಪ್ಪ.—ಮಾನ್ಯ ಆರೋಗ್ಯ ಸಚಿವರೂ ಇತರ ಎಲ್ಲಾ ಸಚಿವರೂ ಹಿರಿಯೂರಿಗೆ ಬಂದ ಸಂದರ್ಭದಲ್ಲಿ ಅಲ್ಲಿನ ಮುನಿಸಿಪಾಲಟಿಯವರು ಅಲ್ಲಿಗೆ ಲೇಡಿ ಡಾಕ್ಟರನ್ನು ಕೊಟ್ಟರೆ ಅವರಿಗೆ ಕಟ್ಟಡವನ್ನು ಕೊಡುವುದಕ್ಕೆ ಸಿದ್ಧರಾಗಿರುವುದಾಗಿ ಹೇಳಲಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ವಿ. ಮಸಿಯಪ್ಪ.—ಮುನಿಸಿಪಾಲಟಿಯವರು ಲೇಡಿ ಡಾಕ್ಟರು ವಾಸಮಾಡುವುದಕ್ಕೆ ಸಾಕಾಗುವಷ್ಟು ಕಟ್ಟಡವನ್ನು ಒದಗಿಸಲು ಏರ್ಪಾಡು ಮಾಡುತ್ತೇವೆಂದು ನಿರ್ಣಯವಾಡಿ ಕಳುಹಿಸಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ನಿರ್ಣಯ ಬಂದಿದೆ, ಆದರೆ ಕಟ್ಟಡವನ್ನು ಕೊಟ್ಟಿಲ್ಲ.

ಶ್ರೀ ವಿ. ಮಸಿಯಪ್ಪ.—ತಕ್ಷಣ ಕಳುಹಿಸಿದರೂ ಅವರಿಗೆ ಜಾಗ ಕೊಡುತ್ತೇವೆಂದು ಹೇಳಿದಮೇಲೆ ಡೈರೆಕ್ಟರವರು ಅಲ್ಲಿಗೆ ಬಂದು ಸ್ಥಳವನ್ನು ನೋಡಿ, ಅದು ತೃಪ್ತಿಕರವಾಗಿದೆ, ಅಲ್ಲಿಗೆ ಕೊಡಬಹುದೆಂದು ಹೇಳಿ ಆ ರೀತಿ ಶಿಫಾರಸು ಸರ್ಕಾರಕ್ಕೆ ಮಾಡಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಕಟ್ಟಡ ದೊರಕಿಲ್ಲವೆಂದು ವರದಿ ಮಾಡಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಮುಂದೆ ಹೊಸದಾಗಿ ಕಟ್ಟಡ ಕಟ್ಟುವುದಕ್ಕೆ ಬೇರೆ ಏರ್ಪಾಡಿದೆ, ಈಗ ತಕ್ಷಣ ಬೇರೆ ಕಟ್ಟಡ ಕೊಡುವುದಕ್ಕೆ ಏರ್ಪಾಡಿದೆ, ಆದುದರಿಂದ ಒಬ್ಬರು ಲೇಡಿ ಡಾಕ್ಟರನ್ನು ಕಳುಹಿಸಿಕೊಡಬೇಕೆಂದು ಕೇಳಲಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

Mr. SPEAKER.—It is stated that it is under consideration.

ಶ್ರೀ ವಿ. ಮಸಿಯಪ್ಪ.—ಈಗಲಾದರೂ ಜಾಗ್ರತೆ ಕಳುಹಿಸಲು ಏರ್ಪಾಡು ಮಾಡುತ್ತೀರಾ ?

Mr. SPEAKER.—It is only a request.

ಶ್ರೀ ಟಿ. ಚನ್ನಯ್ಯ.—ಇಲಾಖೆಯಿಂದ ವರದಿ ತರಿಸಿ ನೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಮಸಿಯಪ್ಪ.—ಅದು ಮಲೇರಿಯಾ ಸ್ಥಳವಾದುದರಿಂದ ಹೆಣ್ಣುಮಕ್ಕಳು ಹೆರಿಗೆ ಕಾಲದಲ್ಲಿ ತೊಂದರೆಯನ್ನನುಭವಿಸುತ್ತಾರೆಂದು ಸರ್ಕಾರದ ಗಮನಕ್ಕೆ ಪದೇ ಪದೇ ತಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ತಂದಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಆದುದರಿಂದ ಇದರ ತುರ್ತನ್ನು ತಿಳಿದು ಜಾಗ್ರತೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಮುನಿಸಿಪಾಲಟಿಯವರು ಯಾವುದಾದರೂ ನಿರಿಯಾದ ಕಟ್ಟಡವನ್ನು ಕೊಟ್ಟ ಪಕ್ಷದಲ್ಲಿ ನಾವು ಕಾರ್ಯಕ್ರಮ ತೆಗೆದುಕೊಂಡು ಅಲ್ಲಿ ಹೆಂಗಸರ ಆಸ್ಪತ್ರೆಯ ಭಾಗವನ್ನು ತೆರೆಯಲು ಏರ್ಪಾಡು ಮಾಡುತ್ತೇವೆ.

Maternity Hospital at Chicknaikanahally.

Q.—573. **Sri C. H. LINGADEVARU** (Chicknaikanahalli).—

Will the Government be pleased to state :—

(*a*) whether the establishment of a Maternity Hospital at Chicknaikanahalli is not being urged both by the Municipal Council and the public from a long time;

(*b*) the steps taken in this behalf?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) The question of opening a Maternity Hospital at Chicknaikanahalli is pending for want of suitable buildings for the hospital and quarters for the staff.

ಶ್ರೀ ಸಿ. ಎಚ್. ಲಿಂಗದೇವರು.—ಈಗ ಅಲ್ಲಿರುವ ಆಸ್ಪತ್ರೆಯಲ್ಲೇ ಮೆಟರ್ನಿಟಿ ಹೋಮ್ ತೆರೆಯುವುದಕ್ಕೆ ಸಾಧ್ಯವಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಈಗ ಅಲ್ಲಿರತಕ್ಕ ಡಿಸ್ಪೆನ್ಸರಿಗೇ ನ್ಯಳ ಸಾಕಾಗುವುದಿಲ್ಲವೆಂದು ತಿಳಿದುಬಂದಿದೆ.

ಶ್ರೀ ಸಿ. ಎಚ್. ಲಿಂಗದೇವರು.—ಅದನ್ನು ಪರಿಶೀಲನೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದೇವೆ.

ಶ್ರೀ ಸಿ. ಎಚ್. ಲಿಂಗದೇವರು.—ಕಟ್ಟಡ ಏರ್ಪಾಡು ಮಾಡುತ್ತೇವೆಂದು ಮುನಿಸಿಪಾಲಿಟಿಯವರು ನಿರ್ಣಯ ಮಾಡಿ ಕಳುಹಿಸಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಕಟ್ಟಡ ಏರ್ಪಾಡು ಮಾಡುತ್ತೇವೆಂದು ನಿರ್ಣಯ ಮಾಡಿದ್ದಾರೆ, ಆದರೆ ಸಾಕಾದಷ್ಟು ಹಣವನ್ನು ಕಾಂಟ್ರಿಬ್ಯೂಷನ್ ಕೊಟ್ಟರೆ ಮಾಡುತ್ತೇವೆ.

ಶ್ರೀ ಸಿ. ಎಚ್. ಲಿಂಗದೇವರು.—ಕಟ್ಟಡಕ್ಕೆ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಹೇಳಿದ್ದಾರೆಯೋ ಅಥವಾ ಅದನ್ನು ನಡೆಸಲು ತಗಲುವ ಖರ್ಚನ್ನು ಕೊಡುತ್ತೇವೆಂದು ಹೇಳಿದ್ದಾರೆಯೊ ?

ಶ್ರೀ ಟಿ. ಚನ್ನಯ್ಯ.—ಅವರು ಹಣ ವಸೂಲುಮಾಡಿ ಕಟ್ಟಡ ಕಟ್ಟಬೇಕೆಂದು ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ.

12-30 P.M.

ಶ್ರೀ ಸಿ. ಎಚ್. ಲಿಂಗದೇವರು.—ಪೌರಸಭೆಯವರೂ ಕಟ್ಟದೆ ಇದ್ದರೆ ಹೆರಿಗೆ ಆಸ್ಪತ್ರೆಗಳನ್ನು ಸರ್ಕಾರದವರು ಕಟ್ಟುವುದಕ್ಕಾಗುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ಈ ಡಿಸ್‌ಪೆನ್ಸರಿ ಕಟ್ಟಿಸಬೇಕಾದರೆ ಸಾರ್ವಜನಿಕರೂ ಮತ್ತು ಸ್ಥಳೀಯ ಸಂಸ್ಥೆಗಳವರೂ ಕಟ್ಟಿಸಬೇಕು.

ಶ್ರೀ ಸಿ. ಎಚ್. ಲಿಂಗದೇವರು.—ಲೋಕಲ್ ಬಾಡಿಯವರು ಅವುಗಳನ್ನು ಕಟ್ಟಿಸಿದರೆ ಎಷ್ಟು ಖರ್ಚುಕೊಡಬೇಕಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ 1/3 ಭಾಗ ಕೊಡಬೇಕಾಗುತ್ತದೆ. ಉಳಿದ ಹಣವನ್ನು ಸರ್ಕಾರದವರು ಕೊಡುತ್ತಾರೆ.

Maternity Hospital at Kabbahalli.

Q.—613. Sri H. K. SHIVARUDRAPPA (Gundlupet-Heggadadevankote).—

Will the Government be pleased to state :—

(*a*) whether there is a request for starting a Maternity Hospital at Kabbahalli of Gundlupet Taluk ;

(*b*) the name of the donor and the amount he is going to donate ;

(*c*) the estimated amount of the hospital ;

(*d*) how the remaining amount that will be required in addition to the amount promised to be donated by the donor will be raised ?

(*e*) whether the donor has deposited the donation or whether he himself will get the building constructed ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) Sri Siriyappa ; Rs. 15,000.

(*c*), (*d*) and (*e*) The proposal will be considered soon after its receipt from the Director of Medical Services.

ಶ್ರೀ ಎಚ್. ಕೆ. ಶಿವರುದ್ರಪ್ಪ.—Director of Medical Services ನಿಂದ ಈ ಆಸ್ಪತ್ರೆ ಬಗ್ಗೆ proposal ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇನ್ನೂ ಬಂದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಆಸ್ಪತ್ರೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ ಏನಾದರೂ standard plans ಮಾಡಿದ್ದಾರೆಯೇ ? Dispensariesಗೆ ಒಂದು plan ಇಲ್ಲವೇ ?

ಶ್ರೀ ಟಿ. ಚನ್ನಯ್ಯ.—ಯಾವ ಸ್ಥಳಗಳಲ್ಲಿ combined dispensary ಅವಶ್ಯಕವಿದೆಯೆಂಬುದು ಸರಕಾರದ ಗಮನಕ್ಕೆ ಬಂದ ಪಕ್ಷದಲ್ಲಿ ಅಂತಹ ಸಂದರ್ಭಗಳಲ್ಲಿ ಸರ್ಕಾರದವರು ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಕಟ್ಟಡದ ಬಗ್ಗೆ ಒಂದು ಪ್ಲಾನ್ ಮಾಡಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಟೈಪ್ ಡಿಸೈನ್ಸ್ ಪಬ್ಲಿಕ್ ವರ್ಕ್ಸ್ ಡಿಪಾರ್ಟಿಮೆಂಟಿನವರು ಕೊಡುತ್ತಾರೆ, ಅದರ ಪ್ರಕಾರ ಕಟ್ಟಡ ಕಟ್ಟಿಸುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಕಟ್ಟಡದ ಬಗ್ಗೆ ಒಂದು ಟೈಪ್ ಪ್ಲಾನ್ ಇದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಕಟ್ಟಡಗಳಿಗೆ ಎಷ್ಟು ರೂಪಾಯಿ ಖರ್ಚಾಗುತ್ತದೆ ?

ಶ್ರೀ ಟಿ. ಚನ್ನಯ್ಯ.—35 ಸಾವಿರ ರೂಪಾಯಿಯಿಂದ 45 ಸಾವಿರ ರೂಪಾಯಿವರೆಗೆ ಖರ್ಚಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಜಿಲ್ಲಾ ಬೋರ್ಡಿನವರು ಹಣ ಕೊಡುತ್ತಾರೆಂದು ವಾಗ್ದಾನ ಮಾಡಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಉಳಿದುದನ್ನು ಸರ್ಕಾರದವರು ಕೊಡುತ್ತಾರೆಯೇ ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡತಕ್ಕ proposal ಇದೆ. ಖಾಸಗೀ ಮಹನೀಯರು ಕೊಡುತ್ತೇವೆಂದು ಹೇಳಿದ್ದಾರೆ. Director of Medical Services ಮುಖಾಂತರ proposal ಬಂದ ಪಕ್ಷದಲ್ಲಿ ಸರ್ಕಾರದವರು ಅದನ್ನು ಪರ್ಯಾಲೋಚನೆ ಮಾಡುತ್ತಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಡಾಕ್ಟರುಗಳಿಗೆ ವಸತಿ ಕಲ್ಪಿಸಿಕೊಡುತ್ತಾರೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅದು ತಪ್ಪು ಗಮನಕ್ಕೆ ಬಂದರೆ ಮತ್ತು ಡಾಕ್ಟರುಗಳಿಗೆ ಕಟ್ಟಡಗ